ರಿಯಲ್‌ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಕರ್ನಾಟಕ
ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಟಿಂಗ್,
ಸಿ.ಎಸ್.ಐ.ಕಾಂಪೌಂಡ್, 3ನೇ ಕ್ರಾಸ್, ಮಿಷನ್‌ರಸ್ತೆ, ಬೆಂಗಳೂರು–560027

ಸಂಖ್ಯೆ: ರೇರಾ/ಆಡಳಿತ/547/2018–19

ದಿನಾಂಕ: 06.12.2018

2624

ಇವರಿಂದ,

ಕಾರ್ಯದರ್ಶಿಗಳು,
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ,
ಬೆಂಗಳೂರು–560 027

ರವರಿಗೆ,

ಮಾನ್ಯ ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು.

ಮಾನ್ಯರೇ,

ವಿಷಯ:– ರೇರಾ ಕಾಯ್ದೆ ಕಲಂ–40 (1) ಮತ್ತು ನಿಯಮ 25 ರನ್ವಯ ಪಿರ್ಯಾದುದಾರರಾದ Ruma Patra ರವರಿಗೆ ಎದುರಿದಾರರಾದ Skylark Mansions Pvt Ltd, No. 37/21, Skylark Chambers, Yellappachetty Layout, Ulsoor Road, Bengaluru - 560042. ಇವರಿಂದ ಪ್ರಾಜೆಕ್ಟ್‌ಗೆ ಕೊಟ್ಟಿದ್ದ ಹಣವನ್ನು ಭೂ ಕಂದಾಯ ಕಾಯ್ದೆ 1964 ರಂತೆ ವಸೂಲು ಮಾಡುವ ಬಗ್ಗೆ.

ಉಲ್ಲೇಖ:– ಸರ್ಕಾರದ ಅಧಿಸೂಚನೆ ಸಂಖ್ಯೆ:ಕಾಇ/350/ಎಲ್‌ಇಟಿ/2015, ದಿ:29.01.2016.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರೇರಾ ಕಾಯ್ದೆ 40 (1) ಮತ್ತು ನಿಯಮ 25 ರನ್ವಯ ಈ ಪ್ರಾಧಿಕಾರದಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ಈ ಕಛೇರಿಯ ನ್ಯಾಯ ನಿರ್ಣಯಾಧಿಕಾರಿ (ಅಡ್ಜುಡಿಕೇಟಿಂಗ್ ಆಫೀಸರ್) ರವರು ರೂ. 1,43,627/– (ಒಂದು ಲಕ್ಷದ ನಲುವತ್ತಮೂರು ಸಾವಿರದ ಆರುನೂರ ಇಪ್ಪತ್ತೇಳು ರೂಪಾಯಿಗಳು ಮಾತ್ರ)ಗಳನ್ನು ಪ್ರಾಜೆಕ್ಟ್‌ಗೆ ಕೊಟ್ಟಿದ್ದ ಹಣದ ಮೊತ್ತವನ್ನು ಫಿರ್ಯಾದುದಾರರಿಗೆ ಪಾವತಿಸಬೇಕೆಂದು ಡೆವಲಪರ್ ಆದ ಎದುರಿದಾರರಾದ Skylark Mansions Pvt Ltd, No. 37/21, Skylark Chambers, Yellappachetty Layout, Ulsoor Road, Bengaluru – 560042. ಇವರಿಗೆ ನಿರ್ದೇಶನವನ್ನು ನೀಡಿರುತ್ತಾರೆ. ಆದರೆ ಪ್ರತಿವಾದಿ ಸಂಸ್ಥೆಯವರು ಸಕ್ಷಮ ಪ್ರಾಧಿಕಾರಿಗಳ ನ್ಯಾಯಾಲಯದ ತೀರ್ಪಿಗನುಗುಣವಾಗಿ ಹಣವನ್ನು ಠೇವಣಿ ಮಾಡದೆ, (ತೀರ್ಪನ್ನು ಪುರಸ್ಕರಿಸದೆ), ರೇರಾ ಕಾಯ್ದೆ ಕಲಂ 40 (1) ನಿಯಮ 25 ರ ಪ್ರಾವಧಾನಗಳನ್ನು ಉಲ್ಲಂಘಿಸಿರುತ್ತಾರೆ. ಈ ಬಗ್ಗೆ ಅನುಸರಿಸಬೇಕಾದ ಎಲ್ಲಾ ಕಾನೂನಿನ ವಿಧಿ–ವಿಧಾನಗಳನ್ನು ಸ್ವಾಭಾವಿಕ ನ್ಯಾಯ ತತ್ವಗಳು ಹಾಗೂ ರೇರಾ ಕಾಯ್ದೆ ಕಲಂ 40(1) ನಿಯಮ 25 ರ ವಿವಿಧ ಪ್ರಾವಧಾನಗಳಿಗನುಗುಣವಾಗಿ ಈಗಾಗಲೇ ಪೂರೈಸಲಾಗಿರುತ್ತದೆ.

ಆದ್ದರಿಂದ ರೇರಾ ಕಾಯ್ದೆ ಕಲಂ 40(1) ನಿಯಮ 25 ಹಾಗೂ ಭೂ ಕಂದಾಯ ಬಾಕಿ ಯೋಜನೆಯ ವಸೂಲಾತಿ ಪ್ರಕ್ರಿಯೆಯನ್ವಯ ಕ್ರಮ ಕೈಗೊಂಡು ಡೆವಲಪರ್ ಆದ ಎದುರಿದಾರರಾದ Skylark Mansions Pvt Ltd, No. 37/21, Skylark Chambers, Yellappachetty Layout, Ulsoor Road, Bengaluru – 560042. ಇವರಿಂದ ಯೋಜನೆಯ ಮೊತ್ತ ರೂ. 1,43,627/- (ಒಂದು ಲಕ್ಷದ ನಲುವತ್ತಮೂರು ಸಾವಿರದ ಆರುನೂರ ಇಪ್ಪತ್ತೇಳು ರೂಪಾಯಿಗಳು ಮಾತ್ರ)ಗಳನ್ನು ಪ್ರಾಜೆಕ್ಟ್‌ಗೆ ಕೊಟ್ಟಿದ್ದ ಹಣದ ಮೊತ್ತವನ್ನು "ಭೂ ಕಂದಾಯ ಬಾಕಿ" ಎಂದು ವಸೂಲು ಮಾಡಿ, ಈ ಪ್ರಾಧಿಕಾರಕ್ಕೆ ಕಳುಹಿಸಿಕೊಡಲು ವಿನಂತಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

K S Latha kumari

ಕಾರ್ಯದರ್ಶಿಗಳು,

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ಲಗತ್ತುಗಳು:

1. ಯೋಜನಾ ಬಾಕಿ ಪಾವತಿ ವಸೂಲಾತಿ ಪ್ರಮಾಣ ಪತ್ರ.
2. ನ್ಯಾಯಾಲಯದ ಆದೇಶದ ಪ್ರತಿ
3. ವಸೂಲಾತಿ ಸಂಬಂಧದ ವಿವರಗಳುಳ್ಳ ತಪಶೀಲು ಪಟ್ಟಿ (Checklist)

ಕಾರ್ಯದರ್ಶಿಗಳು, ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಹಾಗೂ ರೇರಾ ಕಾಯ್ದೆಯಡಿಯಲ್ಲಿ ನೇಮಕಗೊಂಡ ಪ್ರಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಸಂಖ್ಯೆ: ರೇರಾ/ಆಡಳಿತ/547/2018–19 ದಿನಾಂಕ: 06.12.2018

ಅರ್ಜಿದಾರರು		ಪ್ರತಿವಾದಿಗಳು
Ruma Patra Flate No. 201, Went Worth Apartment, 1st Main Road, K R Garden, Murugeshpalya, Bengaluru – 560 0147.	ವಿರುದ್ಧ	Skylark Mansions Pvt Ltd, No. 37/21, Skylark Chambers, Yellappachetty Layout, Ulsoor Road, Bengaluru – 560042.

ಯೋಜನೆಯ ಬಾಕಿ ವಸೂಲಾತಿ ಪ್ರಮಾಣ ಪತ್ರ
(Certificate for Project Recovery)

ರೇರಾ ಕಾಯ್ದೆ ಕಲಂ 40(1) ನಿಯಮ 25 ರಡಿ ಅರ್ಜಿದಾರರು ಸಲ್ಲಿಸಿದ ಕ್ಲೇಮ್ (Claim) ಅರ್ಜಿಯನ್ನು ಯೋಜನಾ ಪಾವತಿಯನ್ನು ರೇರಾ ಕಾಯ್ದೆ ಪ್ರಕಾರ ನ್ಯಾಯ–ನಿರ್ಣಯಿಸಿ, ಪ್ರತಿವಾದಿಗಳು ಅರ್ಜಿದಾರರಿಗೆ ಬಾಕಿ ಯೋಜನಾ ಮೊತ್ತ ರೂ ರೂ. 1,43,627/– (ಒಂದು ಲಕ್ಷದ ನಲುವತ್ತಮೂರು ಸಾವಿರದ ಆರುನೂರ ಇಪ್ಪತ್ತೇಳು ರೂಪಾಯಿಗಳು ಮಾತ್ರ)ಗಳನ್ನು ಪ್ರಾಜೆಕ್ಟ್‌ಗೆ ಕೊಟ್ಟಿದ್ದ ಹಣದ ಮೊತ್ತವನ್ನು ನೀಡಬೇಕೆಂದು, ದಿನಾಂಕ 05.12.2018 ರಂದು ತೀರ್ಪನ್ನು ಸಕ್ಷಮ ಪ್ರಾಧಿಕಾರದ ನ್ಯಾಯಾಲಯವು ನೀಡಿರುತ್ತದೆ. ಈ ತೀರ್ಪನ್ನು ಪ್ರತಿವಾದಿಗಳಿಗೆ ರವಾನಿಸಿ, ಬಾಕಿ ಯೋಜನೆಯ ಮೊತ್ತವನ್ನು ಫಿರ್ಯಾದುದಾರರಿಗೆ ಪಾವತಿಸಲು ನಿರ್ದೇಶನವನ್ನು ನೀಡಲಾಗಿರುತ್ತದೆ. ಆದಾಗ್ಯೂ ಪ್ರತಿವಾದಿಗಳು ಹಣವನ್ನು ಪಾವತಿಸಿರುವುದಿಲ್ಲ.

ಆದುದರಿಂದ, ರೇರಾ ಕಾಯ್ದೆ ಕಲಂ 40(1) ನಿಯಮ 25 ರನ್ವಯ ಪ್ರತಿವಾದಿಗಳು ಅರ್ಜಿದಾರರಿಗೆ ಕಾನೂನಿನನ್ವಯ ಪಾವತಿಸಬೇಕಾಗಿರುವ ಬಾಕಿ ವೇತನ ಮತ್ತು ದಂಡದ ಒಟ್ಟು ಮೊತ್ತ 1,43,627/– (ಒಂದು ಲಕ್ಷದ ನಲುವತ್ತಮೂರು ಸಾವಿರದ ಆರುನೂರ ಇಪ್ಪತ್ತೇಳು ರೂಪಾಯಿಗಳು ಮಾತ್ರ)ಗಳನ್ನು ಪ್ರಾಜೆಕ್ಟ್‌ಗೆ ಕೊಟ್ಟಿದ್ದ ಹಣದ ಮೊತ್ತವನ್ನು ಪ್ರತಿವಾದಿಗಳಿಂದ ಭೂ ಕಂದಾಯ ಬಾಕಿ ಎಂದು ವಸೂಲು ಮಾಡಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 350 ಎಲ್‌ಇಟಿ 2015 ದಿನಾಂಕ 29.01.2016 ರಂತೆ ಅರ್ಜಿದಾರರಾದ Ruma Patra ಇವರ ಹೆಸರಿಗೆ ಚೆಕ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ (ಡಿ.ಡಿ) ಅನ್ನು ಕಳುಹಿಸಲು ನೀಡಿರುವ ಬಾಕಿ ಯೋಜನೆಯ ವಸೂಲಾತಿ ಪ್ರಮಾಣ ಪತ್ರವಿದಾಗಿರುತ್ತದೆ.

K. S. Latha kumari

ಕಾರ್ಯದರ್ಶಿಗಳು
ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ಇವರಿಗೆ,
ಮಾನ್ಯ ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು.

ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಬೆಂಗಳೂರು ಇವರು ಘನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಿಗೆ ಭೂ ಕಂದಾಯದ ಬಾಕಿಯಂತೆ ವಸೂಲಾತಿ ಮಾಡಲು ಕಳುಹಿಸಿರುವ ಬಾಕಿ ಯೋಜನೆಯ ವಸೂಲಾತಿ ಪ್ರಕರಣದ ತಪಶೀಲು ಪಟ್ಟಿ (Checklist)

ಸಂಖ್ಯೆ: ರೇರಾ/ಆಡಳಿತ/547/2018–19 ದಿನಾಂಕ: 06.12.2018

1	ಪ್ರಸ್ತುತ ಪ್ರಕರಣದಲ್ಲಿ ಪ್ರಸ್ತಾಪಿಸಿರುವ ಮೊಬಲಗನ್ನು ವಸೂಲಾತಿ ಮಾಡಲು ಇಲಾಖೆಯ ವತಿಯಿಂದ ಕಾನೂನು ರೀತ್ಯ ಎಲ್ಲಾ ವಿಧಿವಿಧಾನಗಳನ್ನು ಅನುಸರಿಸಲಾಗಿದೆಯೇ?	ಅನುಸರಿಸಲಾಗಿದೆ
2	ಪ್ರತಿಯೊಂದು ಬಾಕಿದಾರರ ಸಂಸ್ಥೆಯ ಪ್ರಕರಣಕ್ಕೂ ಮುಖಪತ್ರ (ಕವರಿಂಗ್ ಲೆಟರ್) ಹಾಕಲಾಗಿದೆಯೇ?	ಮುಖಪತ್ರ ಹಾಕಲಾಗಿದೆ
3	ವಸೂಲಾತಿ ಪತ್ರ ತ್ರಿಪ್ರತಿಯಲ್ಲಿ ಕಳುಹಿಸಲಾಗಿದೆಯೇ?	ತ್ರಿಪ್ರತಿಯಲ್ಲಿ ಕಳುಹಿಸಿದೆ
4	ವಸೂಲಾತಿ ಪತ್ರಕ್ಕೆ ಸಮರ್ಥ/ ಸಕ್ಷಮ ಪ್ರಾಧಿಕಾರದ ಅಧಿಕಾರಿಯಿಂದ ದೃಢೀಕರಿಸಲಾಗಿದೆಯೇ?	ದೃಢೀಕರಿಸಿದೆ
5	ಪ್ರಸ್ತುತ ಪ್ರಕರಣದ ವಸೂಲಿ ಕ್ರಮಕ್ಕೆ ಸಂಬಂಧಿಸಿದಂತೆ ಬೇರೆ ಯಾವುದಾದರೂ ಕಡೆ ನ್ಯಾಯಾಲಯದಲ್ಲಿ ಪ್ಯಾರಲಲ್ ಪ್ರೊಸೀಡಿಂಗ್ಸ್ ನಡೆಯುತ್ತಿದೆಯೇ ಅಥವಾ ಈ ಹಿಂದೆ ನಡೆದಿದ್ದ ಪಕ್ಷದಲ್ಲಿ ನ್ಯಾಯಾಲಯದ ತೀರ್ಪಿನ ಪ್ರತಿ ಲಗತ್ತಿಸುವುದು.	ಇಲ್ಲಾ
6	ವಸೂಲಾತಿ ಪತ್ರದಲ್ಲಿ ಬಾಕಿದಾರರ ಸಂಸ್ಥೆಯ ಪೂರ್ಣ ವಿಳಾಸವನ್ನು ನಮೂದಿಸಲಾಗಿದೆಯೇ?	ನಮೂದಿಸಿದೆ
7	ಬಾಕಿದಾರಿನಿಂದ ಇಲಾಖೆಗೆ ಬರಬೇಕಾಗಿರುವ ಬಾಕಿಯು ಯಾವ ವರ್ಷಕ್ಕೆ ಸಂಬಂಧಪಟ್ಟಿದ್ದು?	2018
8	ಪ್ರಸ್ತುತ ಪ್ರಕರಣದಲ್ಲಿ ನಮೂದಿಸಿರುವ ಸಂಸ್ಥೆ/ಬಾಕಿದಾರರು ಹಾಲಿ ಅಸ್ತಿತ್ವದಲ್ಲಿದೆಯೇ? ಹಾಗೂ ಸ್ಥಳದಲ್ಲಿ ವಾಸವಾಗಿದ್ದಾರೆಯೇ? ಕ್ರಮವಾಗಿ	ಅಸ್ತಿತ್ವದಲ್ಲಿದೆ
9	ಪ್ರಸ್ತುತ ಪ್ರಕರಣದಲ್ಲಿ ನಮೂದಿಸಿರುವ ಬಾಕಿದಾರರುಗಳ ಅಥವಾ ಚರ ಹಾಗೂ ಸ್ಥಿರ ಸ್ವತ್ತುಗಳು ಏನಾದರೂ ಇದೆಯೇ ಹಾಲಿ ಚರ ಆಸ್ತಿ ಇದ್ದಲ್ಲಿ ಪಟ್ಟಿ ಮಾಡಿ ನಮೂದಿಸುವುದು ಸ್ಥಿರಾಸ್ತಿ ಇದ್ದಲ್ಲಿ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಸ್ಥಿರಾಸ್ತಿಗಳ ವಿವರಗಳನ್ನು ಪಡೆದು ನಮೂದಿಸುವುದು, ಕಟ್ಟಡಗಳು ಆಗಿದ್ದಲ್ಲಿ ನಗರಸಭೆಯ/ ಪುರಸಭೆಯ ಅಧಿಕಾರಿಗಳಿಂದ ಪಟ್ಟಿ ಪಡೆದು (ಖಾತೆ ಹಾಗೂ ಅಸೆಸ್‌ಮೆಂಟ್ ನಂಬರ್ ನಮೂದಿಸುವುದು)	–

10	ಪ್ರಸ್ತುತ ಪ್ರಕರಣದಲ್ಲಿ ಅಂಶ 8 ಮತ್ತು 9 ರಂತೆ ವಸೂಲಿಗೆ ರಹವಿಲ್ಲವೆಂದು ಇಲಾಖೆಗೆ ಸ್ಪಷ್ಟವಾಗಿ ತಿಳಿಸಿದ್ದಾಗ್ಯೂ ಕಂದಾಯ ಇಲಾಖೆಗೆ ವಸೂಲಿ ಕ್ರಮಕ್ಕೆ ಕಳುಹಿಸಿಕೊಡುವ ಔಚಿತ್ಯವೇನಾದರೂ ಇದೆಯೇ?	–
11	ಕಂದಾಯ ಇಲಾಖೆಯಲ್ಲಿ ವಸೂಲಿ ಕ್ರಮ ಜರುಗಿಸುವ ಪ್ರಕರಣಗಳಲ್ಲಿ ವಸೂಲಿ ವೆಚ್ಚವನ್ನು (ಅಂದರೆ ಹರಾಜು ಸಮಯದಲ್ಲಿ) ನಿಮ್ಮ ಇಲಾಖೆಯಿಂದ ಭರಿಸಲಾಗಿದೆಯೇ?	ಇಲ್ಲ
12	ಪ್ರಸ್ತುತ ಪ್ರಕರಣದಲ್ಲಿ ನಿಮ್ಮ ಇಲಾಖೆಯ ವತಿಯಿಂದ ಸದರಿ ಬಾಕಿದಾರರಿಗೆ ಏನಾದರೂ ಕಂತುಗಳನ್ನು ನಿಗದಿಪಡಿಸಲಾಗಿದೆಯೇ?	ಇಲ್ಲ
13	ವಸೂಲಿ ಮಾಡಿದ ಮೊಬಲಗನ್ನು ನಿಮ್ಮ ಇಲಾಖೆಗೆ ಡಿ.ಡಿ ಮೂಲಕ ಕಳುಹಿಸಿದಲ್ಲಿ ಡಿ.ಡಿ ಕಮಿಷನ್ ಹಣವನ್ನು ವಸೂಲಿ ಮಾಡಿದ ಹಣದಲ್ಲಿಯೇ ಭರಿಸಬೇಕೋ ಅಥವಾ ಬಾಕಿದಾರರಿಂದ ಭರಿಸಬೇಕೋ?	ಬಾಕಿದಾರರಿಂದ ಪಡೆದು ಭರಿಸಬೇಕು
14	ವಸೂಲಿ ಮಾಡಿದ ಮೊಬಲಗನ್ನು ಸರ್ಕಾರದ ಖಜಾನೆಗೆ ಜಮಾ ಮಾಡಿಸುವ ಅವಕಾಶವಿದ್ದರೆ ಹೆಡ್ ಆಫ್ ಅಕೌಂಟನ್ನು ನಮೂದಿಸಲಾಗಿದೆಯೇ?	Ruma Patra ರವರ ಹೆಸರಿನಲ್ಲಿ ಚೆಕ್/ಡಿ.ಡಿ ಯನ್ನು ಪಡೆಯುವುದು.
15	ಒಂದು ವೇಳೆ ಕಾರ್ಯಾಲಯದಿಂದ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ಗೆ ವಸೂಲಿಗೆ ಕಳುಹಿಸಿದ ಪ್ರಕರಣಗಳಲ್ಲಿ ಆ ದಿನಾಂಕದಿಂದ ಹಿಡಿದು ಎರಡು ತಿಂಗಳೊಳಗೆ ತಹಶೀಲ್ದಾರ್ ರವರಿಗೆ ಸಹಕಾರ ನೀಡಿ ಪೂರ್ವ ವಸೂಲಿ ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತದೆಯೇ?	ಯಾವುದೇ ಮಾಹಿತಿ ಕೋರಿದಲ್ಲಿ ಸಹಕರಿಸಲಾಗುವುದು.
16	ಪ್ರಸ್ತುತ ಪ್ರಕರಣದಲ್ಲಿ ತಾವು ತಿಳಿಸಿರುವ ಒಟ್ಟು ಮೊಬಲಗನ್ನು ಮಾತ್ರ ವಸೂಲು ಮಾಡಬೇಕೆ? ಅಥವಾ ಬಡ್ಡಿ ಸೇರಿಸಿ ವಸೂಲು ಮಾಡಬೇಕೆ? ಬಡ್ಡಿಯದರ ಹಾಗೂ ಯಾವ ದಿನಾಂಕದಿಂದ ಲೆಕ್ಕ ಹಾಕಬೇಕೆಂಬುದರ ವಿವರ ನೀಡಿ	ಒಟ್ಟು ಬಾಕಿ ಯೋಜನಾ ಮೊತ್ತ ಮೊತ್ತ ರೂ. 1,43,627/–ಗಳನ್ನು ವಸೂಲಿ ಮಾಡಬೇಕು.

ಕಾರ್ಯದರ್ಶಿಗಳು

ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ